ಅಸಲು ದಾವೆ ನಂ.38/2020

ಡಿ.ಡಬ್ಲೂಃ 1- ಮೆಹರ್ ತಾಜ್ ಕೋಂ ಚಾಂದ್ ಪಾಷಾ

ದಿನಾಂಕಃ 05/02/2026 ರಂದು ಸಾಕ್ಷಿಯನ್ನು ಪುನಃ ಕರೆಸಿ ಪ್ರಮಾಣೀಕರಿಸಲಾಯಿತು.

**ಪಾಟೀ ಸವಾಲು ವಾದಿ ಪರವಾಗಿ ಶ್ರೀ ಎಸ್ ಆರ್ ಬಿ ವಕೀಲರಿಂದ**

1. ನನಗೆ ವಾದಿಯ ಪರಿಚಯವಿರುತ್ತದೆ. ನನಗೆ ಕೆ.ಜಿ.ಎಫ್ ನ ಬ್ರೋಕರ್ ಆದ ರಾಜಾಸಿಂಗ್ ರವರ ಮೂಲಕ ವಾದಿಯ ಪರಿಚಯವಾಗಿರುತ್ತದೆ. ವಾದಿಯು ಯಾವ ಪರಿಹಾರ ಕೇಳಿ ಈ ದಾವೆ ದಾಖಲಿಸಿರುತ್ತಾರೆ ಎಂದು ನನಗೆ ಗೊತ್ತು. ಅವರು ಬಡ್ಡಿ ಸಹಿತ ಕ್ರಯದ ಪ್ರತಿಫಲದ ವಸೂಲಾತಿಗಾಗಿ ದಾವೆ ದಾಖಲಿಸಿಕೊಂಡಿರುತ್ತಾರೆ. ದಾವಾ ಸ್ವತ್ತು ಒಂದು ನಿವೇಶನ ಆಗಿರುತ್ತದೆ ಆದರೆ ನನಗೆ ಅದರ ಸಂಖ್ಯೆ ಹೇಳಲು ಬರುವುದಿಲ್ಲ. ಅದರ ವಿಸ್ತೀರ್ಣ 30X40 ಅಡಿ ಇರುತ್ತದೆ. ಅದು ಕೆ.ಜಿ.ಎಫ್ ನ ಕೃಷ್ಣಾರಾಜಪುರಂ ಗ್ರಾಮದಲ್ಲಿ ಇರುತ್ತದೆ. ಅದು ಯಾವ ಗ್ರಾಮ ಪಂಚಾಯ್ತಿ ಅಧಿಕಾರ ವ್ಯಾಪ್ತಿಯಲ್ಲಿ ಬರುತ್ತದೆ ಎಂದು ನನಗೆ ಗೊತ್ತಿರುವುದಿಲ್ಲ. ದಾವಾ ಸ್ವತ್ತಿನ ಒಂದು ದಿಕ್ಕಿನಲ್ಲಿ ರಸ್ತೆ ಇರುತ್ತದೆ ಮತ್ತು ಉಳಿದ **3** ದಿಕ್ಕುಗಳಲ್ಲಿ ಮನೆಗಳು ಇರುತ್ತವೆ. ಸದರಿ ರಸ್ತೆ ಯಾವ ದಿಕ್ಕಿನಲ್ಲಿ ಇರುತ್ತದೆ ಎಂದು ನನಗೆ ನಿಖರವಾಗಿ ಹೇಳಲು ಬರುವುದಿಲ್ಲ. ನಾನು ದಾವಾ ಸ್ವತ್ತನ್ನು ಕೆ.ಜಿ.ಎಫ್ ನ ಅಬ್ದುಲ್ ಶುಕೂರ್ ರವರಿಂದ **1992** ರಲ್ಲಿ ಖರೀದಿಸಿದ್ದೆ.

**2.** ವಾದಿಯು ಬೆಮಲ್ ಕಂಪನಿಯಲ್ಲಿ ಸೆಕ್ಯುರಿಟಿ ಗಾರ್ಡ್ ಆಗಿ ಕೆಲಸ ಮಾಡುತ್ತಿದ್ದರು. ನಾನು ನನ್ನ ಮನೆಯ ಅವಶ್ಯಕತೆಗಳಿಗಾಗಿ ದಾವಾ ಸ್ವತ್ತನ್ನು ವಾದಿಗೆ ಮಾರಾಟ ಮಾಡಿರುತ್ತೇನೆ. ನಾನು **8** ನೇ ತರಗತಿವರೆಗೆ ಓದಿರುತ್ತೇನೆ. ನಾನು ಗೃಹಿಣಿ ಆಗಿರುತ್ತೇನೆ. ನಾನು **2021** ರಲ್ಲಿ ದಾವಾ ಸ್ವತ್ತನ್ನು ವಾದಿಗೆ ಮಾರಾಟ ಮಾಡಿರುತ್ತೇನೆ. ದಾವಾ ಸ್ವತ್ತು ಮಾರಾಟ ಇಟ್ಟಿರುತ್ತೇನೆ ಎಂದು ನಾನು ಒಬ್ಬ ಬ್ರೋಕರ್ ಗೆ ತಿಳಿಸಿದ್ದು ಅವರು ಮೇಲೆ ಹೇಳಿದ ರಾಜಾಸಿಂಗ್ ಬ್ರೋಕರ್ ಗೆ ತಿಳಿಸಿದ್ದು ಅವರು ಸದರಿ ವಿಚಾರವನ್ನು ವಾದಿಗೆ ತಿಳಿಸಿದರು. ನಾನು ದಾವಾ ಸ್ವತ್ತನ್ನು ವಾದಿಗೆ ಮಾರಾಟ ಮಾಡುವಾಗ ನನ್ನ ಹತ್ತಿರ ನನ್ನ ಹೆಸರಿನಲ್ಲಿದ್ದ ನೊಂದಾಯಿತ ಕ್ರಯ ಪತ್ರ, ನನಗೆ ಮಾರಾಟ ಮಾಡಿದ ವ್ಯಕ್ತಿಯ ನೊಂದಾಯಿತ ಕ್ರಯ ಪತ್ರ ಮತ್ತು ನನ್ನ ಹೆಸರಿನಲ್ಲಿ ಇದ್ದ ದಾವಾ ಸ್ವತ್ತಿನ ಖಾತಾ ನಕಲು ಇತ್ತು. ಈ ದಾವೆಯಲ್ಲಿ ವಾದಿಯು ಏನೆಲ್ಲಾ ದಾಖಲೆಗಳನ್ನು ಹಾಜರುಪಡಿಸಿರುತ್ತಾರೆ ಎಂದು ನಾನು ತಿಳಿದುಕೊಂಡಿಲ್ಲ. ದಾವೆ ದಾಖಲಿಸುವುದಕ್ಕೂ ಮುಂಚೆ ವಾದಿಯು ನನಗೆ ಒಂದು ಸಲ ನೋಟಿಸ್ ಕೊಟ್ಟಿದ್ದರು ಆದರೆ ದಾವೆ ದಾಖಲಿಸಿದ ನಂತರ ನನಗೆ ವ್ಯಯಕ್ತಿಕವಾಗಿ ಭೇಟಿ ಆಗಿ ಅವರು ದಾವೆ ದಾಖಲಿಸಲು ಮಾಡಿದ ಖರ್ಚನ್ನು ಕೊಡಬೇಕು ಎಂದು ನನಗೆ ಕೇಳಿಕೊಂಡಿದ್ದರು. ಆ ಸಮಯದಲ್ಲಿ ದಾವಾ ಸ್ವತ್ತು ಇರುವ ಲೇಔಟ್ ನ ನಕ್ಷೆ ನನ್ನ ಹತ್ತಿರ ಇರಲಿಲ್ಲ.

**3.** ನಾನು ನಿಪಿ-**2** ಕ್ರಯ ಪತ್ರವನ್ನು ಸಂಪೂರ್ಣವಾಗಿ ಓದಿ ತಿಳಿದುಕೊಂಡು ಅದಕ್ಕೆ ಸಹಿ ಹಾಕಿರುತ್ತೇನೆ ಎಂದರೆ ಸರಿಯಲ್ಲ ಕಾರಣ ಆ ಸಮಯದಲ್ಲಿ ವಾದಿ ಮತ್ತು ರಾಜಾ ಸಿಂಗ್

ರವರು ಪತ್ರವನ್ನು ಓದಲು ನನಗೆ ಅವಕಾಶ ಕೊಡಲಿಲ್ಲ. ಈಗಲೂ ಸಹ ನಾನು ಸದರಿ ಪತ್ರವನ್ನು ಓದಿ ತಿಳಿದುಕೊಂಡಿಲ್ಲ.

(ಈ ಹಂತದಲ್ಲಿ ಮುಂದುವರೆದ ಪಾಟೀ ಸವಾಲಿಗಾಗಿ ಸಮಯಾವಕಾಶ ಕೋರಿರುವುದರಿಂದ ಪಾಟೀ ಸವಾಲು ಮುಂದೂಡಲಾಯಿತು.)

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆ ಮೇರೆಗೆ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.)

ಓ.ಹೇ.ಕೇ.ಸರಿ.ಇದೆ.

(ಮುಜಫರ್)
1 ನೇ ಅಪರ ಹಿರಿಯ ಸಿ.ಜೆ. ಮತ್ತು ಜೆಎಂಎಫ್‌ಸಿ
ಕೆಜಿಎಫ್